28/9/21

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–2759/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/10/2016

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಎಸ್.ಬಿ. ಪಾಟೀಲ್, ವಕೀಲರು, ವಿಜಾಪುರ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ತಮ್ಮ ವರದಿ ಸಲ್ಲಿಸುವ ಬಗ್ಗೆ.

*–*–*

1. ದೂರುದಾರರಾದ ಶ್ರೀ ಎಸ್.ಬಿ. ಪಾಟೀಲ್, ವಕೀಲರು, ವಿಜಾಪುರ ಇವರು ಈ ಸಂಸ್ಥೆಗೆ ದೂರನ್ನು ನೀಡಿ, ಅದರಲ್ಲಿ ವಿಜಾಪುರದ ವಿವೇಕ್ ನಗರ (ಪಶ್ಚಿಮ ಕಾಲೋನಿಯಲ್ಲಿ) 400.00 ಮೀ., ಉದ್ದದ ರಸ್ತೆ ಇದ್ದು, ಅದನ್ನು ಅನುಮೋದಿತ ನಕ್ಷೆಯಂತೆ ನಿರ್ವಹಿಸಿದ್ದು, ಅದು 9.00 ಮೀ., ಅಗಲದ್ದಾಗಿರುತ್ತದೆ. ಇದು ಉತ್ತರದಿಂದ ದಕ್ಷಿಣಕ್ಕೆ ಸಾಗಿರುವ ರಸ್ತೆಯಾಗಿರುತ್ತದೆ ಹಾಗೂ ಇದು ಹೌಸಿಂಗ್ ಬೋರ್ಡ್ ಕಾಲೋನಿಯ ರಸ್ತೆಗೆ ಪಕ್ಕದಲ್ಲಿರುತ್ತದೆ. ಈ ರಸ್ತೆಗೆ ತಾಗಿದಂತೆ ಪಕ್ಕದಲ್ಲೇ ಒಂದು ಸಾರ್ವಜನಿಕ ಚರಂಡಿ ಇರುತ್ತದೆ. ಈ ರಸ್ತೆಯ ಬದಿಯಲ್ಲಿರುವ ಮನೆಯವರುಗಳು ಅಕ್ರಮವಾಗಿ ಆಕ್ರಮಿಸಿ ತಮ್ಮ ಕಟ್ಟಡಗಳನ್ನು ಕಟ್ಟಿರುತ್ತಾರೆ. ಇದರಿಂದ, ರಸ್ತೆಯ ಅಗಲವು ಕಮ್ಮಿಯಾಗಿ ಜನರಿಗೆ ತೊಂದರೆಯುಂಟಾಗಿರುತ್ತದೆ. ಹಾಗೂ ಸದರಿ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯಲು ಸಹ ತೊಂದರೆಯಾಗಿರುತ್ತದೆ ಮತ್ತು ಆ ಚರಂಡಿ ನೀರು ಮೇಲೆ ಹರಿದು ಸುತ್ತಮುತ್ತಲಿನ ಜಾಗವು ನೀರಿನಲ್ಲಿ ಮುಳುಗುತ್ತದೆ ಹಾಗೂ ನೀರು ಅಲ್ಲಿ ಬಂದು ನಿಲ್ಲುತ್ತದೆ. ಇದರಿಂದ, ಕೆಲವು ಮನೆಯವರು ತಮ್ಮ ಮನೆಯಿಂದ ಹೊರಗೆ ಬರಲು ಸಹ ಸಾಧ್ಯವಿರುವುದಿಲ್ಲ. ವಿಜಾಪುರದ ನಗರಾಭಿವೃದ್ಧಿ ಪ್ರಾಧಿಕಾರದವರು ಈ ಮೇಲೆ ಹೇಳಿದ ಅಂಶವನ್ನು ಪರಿಗಣಿಸಿದ್ದು, ಜಿಲ್ಲಾಧಿಕಾರಿಗಳು ಸಹ ನಗರಾಭಿವೃದ್ಧಿ ಅಧಿಕಾರಿಗಳೊಡನೆ ಸ್ಥಳವನ್ನು ಪರಿಶೀಲಿಸಿ, ಅಕ್ರಮವಾಗಿ ರಸ್ತೆಯನ್ನು ಒತ್ತುವರಿ ಮಾಡಿರುವ ಕಟ್ಟಡಗಳನ್ನು ತೆರವುಗೊಳಿಸುವಂತೆ ತಿಳಿಸಿದ್ದು, ಇದರಂತೆ, ಸಂಬಂಧಪಟ್ಟ ಅಧಿಕಾರಿಗಳು ಒತ್ತುವರಿ ಮಾಡಿದ ಜಾಗವನ್ನು ಗುರುತಿಸಿ, ಅದನ್ನು ತೆರವುಗೊಳಿಸಲು ತಿಳಿಸಿದ್ದು, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಒತ್ತುವರಿ ಮಾಡಿರುವ ಕಟ್ಟಡಗಳ ಮಾಲೀಕರಿಗೆ ಈ ಬಗ್ಗೆ ಸಿವಿಲ್ ದಾವೆ ಹೂಡಲು ತಿಳಿಸಿರುತ್ತಾರೆ. ಇದರಲ್ಲಿ 8 ಮನೆ ಮಾಲೀಕರು ಅಸಲು ದಾವೆ ಸಂಖ್ಯೆ: 87/2011 ಅನ್ನು ವಿಜಾಪುರದ ಸಿವಿಲ್ ನ್ಯಾಯಾಲಯದಲ್ಲಿ

ಹೂಡಿದ್ದು, ಅದು ವಜಾ ಗೊಂಡಿರುತ್ತದೆ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದ ಮೇರೆಗೆ, ವಿಜಾಪುರದ ಪುರಸಭೆ ಮುಖ್ಯಾಧಿಕಾರಿಗಳಿಂದ ವರದಿ ಸಲ್ಲಿಸಲು ಆದೇಶಿಸಲಾಗಿದ್ದು, ಅದರಂತೆ, ಮಹಾನಗರ ಪಾಲಿಕೆಯ ಆಯುಕ್ತರು ಒಂದು ಪತ್ರವನ್ನು ಬರೆದು, ಅದರಲ್ಲಿ ವಾರ್ಡ್ ನಂ.2ರಲ್ಲಿ 2006ರಲ್ಲಿ ಜಿಲ್ಲಾಡಳಿತದಿಂದ ರಸ್ತೆ ಅತಿಕ್ರಮಣ ತೆರವುಗೊಳಿಸುವ ಕಾರ್ಯ ನಡೆಸಲಾಗಿತ್ತು, ಆ ಸಮಯದಲ್ಲಿ ನಗರಸಭೆ ಒಡೆತನದಲ್ಲಿ ಬರುವ ಮಳಿಗೆಗಳಿಗೆ, ಮಳಿಗೆ ಠೇವಣಿ ಭರಿಸಲು ಪತ್ರಿಕಾ ಪ್ರಕಟಣೆ ಮುಖಾಂತರ ಸೂಚಿಸಲಾಗಿತ್ತು ಎಂಬುದಾಗಿ ಬೇರೆ ವಿಷಯದ ಬಗ್ಗೆ ತಿಳಿಸಿ ಪತ್ರ ಬರೆದಿರುತ್ತಾರೆ. ಇದಾದ ನಂತರ ಮತ್ತೆ ದಿ: 30/06/2015 ರಂದು ಸದರಿ ಆಯುಕ್ತರು, ಮಹಾನಗರ ಪಾಲಿಕೆ, ವಿಜಾಪುರ ಇವರಿಗೆ ಪತ್ರ ಬರೆದು, ರಸ್ತೆ ಅತಿಕ್ರಮಣ ತೆರವುಗೊಳಿಸುವ ಬಗ್ಗೆ ವರದಿ ಸಲ್ಲಿಸುವಂತೆ ತಿಳಿಸಲಾಗಿದ್ದು, ಅದರಂತೆ, ಆಯುಕ್ತರು, ವಿಜಾಪುರ, ಮಹಾನಗರ ಪಾಲಿಕೆ ದಿ: 04/07/2015ರ ಪತ್ರದ ಮುಖೇನ ವರದಿ ಸಲ್ಲಿಸಿ, ವಿಜಾಪುರ ಮಹಾನಗರ ಪಾಲಿಕೆಯು ಅತಿಕ್ರಮಣಗೊಳಿಸಿರುವ ಜಾಗವನ್ನು ತೆರವುಗೊಳಿಸಲು ದಿ:28/06/2015 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸಭೆಯಲ್ಲಿ ತಿಳಿಸಿದ ಪ್ರಕಾರ, ಆಗಸ್ಟ್ ಮೊದಲನೇ ವಾರದಲ್ಲಿ ಹೆಚ್ಚುವರಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾರ್ಯಪ್ರಾರಂಭಿಸಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ ಪ್ರಕಾರ, ಕ್ರಮ ಕೈಗೊಳ್ಳಲು ಸರ್ವೇ ಇಲಾಖೆಗೆ ಅಳತೆ ಮಾಡಲು ಪತ್ರ ಬರೆಯಲು ತಿಳಿಸಿದ ಪ್ರಕಾರ, ಅಳತೆ ಮಾಡಿದ ನಂತರ ಹಂತ, ಹಂತವಾಗಿ ಕ್ರಮ ಕೈಗೊಳ್ಳಲಾಗುವುದು ಹಾಗೂ ವಿಜಯಪುರ ನಗರದ ಇನ್ನಿತರೆ ಅತಿಕ್ರಮಣಗಳನ್ನು ಕೂಡ ತೆರವುಗೊಳಿಸಲು ಆಧ್ಯತೆಯ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರ ಸಭೆಯಲ್ಲಿ ಮಾನ್ಯ ಸಚಿವರು ತಿಳಿಸಿರುತ್ತಾರೆ. ಎಲ್ಲಾ ಅತಿಕ್ರಮಣವನ್ನು ತೆರವುಗೊಳಿಸಲು ಸಾಕಷ್ಟು ಅನುದಾನದ ಅವಶ್ಯವಿರುವುದರಿಂದ, ಸದರಿ ಕಾರ್ಯ ವಿಳಂಭವಾಗಿರುತ್ತದೆ. ಸದರಿ ಅತಿಕ್ರಮಣ ಕಾರ್ಯವನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಹಾಗೂ ಆದ್ಯತೆಯ ಮೇಲೆ ಇನ್ನುಳಿದ ಅತಿಕ್ರಮಣವನ್ನು ತೆರವುಗೊಳಿಸಲಾಗುವುದೆಂದು ತಿಳಿಸಿರುತ್ತಾರೆ.

2. ದಿ:27/07/2015 ರಂದು ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ ಇವರು ಮಾಸ್ಟರ್ ಪ್ಲಾನ್ ಮಾಹಿತಿಯನ್ನು ಒದಗಿಸಿ, ಅದರಲ್ಲಿ ಒಟ್ಟು ತೆರವುಗೊಳಿಸಬೇಕಾದ ಆಸ್ತಿಗಳ ವಿವರಗಳನ್ನು ಹಾಗೂ ತೆರವುಗೊಳಿಸಿದ ವಿವರಗಳನ್ನು ಸಲ್ಲಿಸಿರುತ್ತಾರೆ. ಸದರಿ ವಿವರವನ್ನು ಹಾಜರುಪಡಿಸಲಾಗಿದೆ. ಸದರಿ ಪತ್ರಕ್ಕೆ ಲಗತ್ತಿಸಿರುವ ತೆರವುಗೊಳಿಸಬೇಕಾಗಿರುವ ಒಟ್ಟು ಆಸ್ತಿಗಳ ಸಂಖ್ಯೆಯನ್ನು 161 ಎಂದು ತೋರಿಸಿದ್ದು, ತೆರವುಗೊಳಿಸಿದ ಆಸ್ತಿಗಳ ಸಂಖ್ಯೆಯನ್ನು ಒಟ್ಟು 151 ಎಂದು ಹಾಗೂ ತೆರವುಗೊಳಿಸದ ಆಸ್ತಿಗಳನ್ನು 8 ಎಂದು ತೋರಿಸಿರುತ್ತಾರೆ. ದಿ: 04/07/2015ರ ಪತ್ರದ ಫ್ಯಾಕ್ಸ್ ಪ್ರತಿ ಇದ್ದು, ಇದರ ಮೇಲೆ ಮಹಾನಗರ

ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 7(2)ರಲ್ಲಿ ಪ್ರದತ್ತವಾದ ಅಧಿಕಾರದಡಿ ಸ್ವಯಂ ಪ್ರೇರಣಾ ಪ್ರಕರಣವನ್ನು ನೋಂದಾಯಿಸಿಕೊಂಡು ತನಿಖೆಗೆ ಆದೇಶಿಸಲಾಗಿರುತ್ತದೆ ಹಾಗೆಯೇ ಮಹಾನಗರ ಪಾಲಿಕೆಯಿಂದ ತಿಂಗಳವಾರು ಎಷ್ಟು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲಾಗಿರುತ್ತದೆ ಎಂಬುವ ಬಗ್ಗೆ ಹಾಗೇ ಒಟ್ಟು ಎಷ್ಟು ಕಟ್ಟಡಗಳನ್ನು ತೆರವುಗೊಳಿಸಬೇಕಾಗಿರುತ್ತದೆ ಎಂಬುದರ ಬಗ್ಗೆ ವರದಿ ಸಲ್ಲಿಸುವಂತೆ ಆದೇಶಿಸಲಾಗಿದ್ದು, ಅದರಂತೆ, ಮಹಾನಗರ ಪಾಲಿಕೆಯ ಆಯುಕ್ತರು ಮೇಲೆ ಹೇಳಿದ ದಿ:27/07/2015ರ ಪತ್ರದ ಮುಖೇನ ವರದಿಯನ್ನು ಸಲ್ಲಿಸಿದ್ದು, ಅದರೊಳಗೆ 8 ಕಟ್ಟಡಗಳನ್ನು ತೆರವುಗೊಳಿಸದೆ ಇರುವ ಬಗ್ಗೆ ತಿಳಿಸಲಾಗಿದ್ದು, ಆರೀತಿ ತೆರವುಗೊಳಿಸದೆ ಇರುವ ಕಾರಣದ ಬಗ್ಗೆ ತಿಳಿಸಲು ಮಹಾನಗರ ಪಾಲಿಕೆಯ ಆಯುಕ್ತರಿಗೆ ಪತ್ರ ಬರೆಯಲಾಗಿದ್ದು, ಮಹಾನಗರ ಪಾಲಿಕೆಯ ಆಯುಕ್ತರು ಕೋರಿದ ಮಾಹಿತಿಯನ್ನು ಸಲ್ಲಿಸದ ಹಿನ್ನೆಲೆಯಲ್ಲಿ, ಸದರಿ ಆಯುಕ್ತರಿಗೆ ಈ ಸಂಸ್ಥೆಗೆ ಖುದ್ದಾಗಿ ಹಾಜರಾಗಲು ನೋಟೀಸ್ ನೀಡಲಾಗಿದ್ದು, ಮಹಾನಗರ ಪಾಲಿಕೆಯ ಆಯುಕ್ತರ ಬದಲಾಗಿ ಸದರಿ ದಿನಾಂಕದಂದು ಶ್ರೀ ವಿ.ಎಸ್. ಗಾಣಿಗರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಜರಾಗಿರುತ್ತಾರೆ ಹಾಗೇ ಎದುರುದಾರರ ಪರವಾಗಿ ವಕೀಲರು ಹಾಜರಾಗಿರುತ್ತಾರೆ ಮತ್ತೆ ಎದುರುದಾರರ ವಕೀಲರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಸಮಯ ಕೋರಿರುತ್ತಾರೆ.

3. ದಿನಾಂಕ: 15/02/2016 ರಂದು ಎದುರುದಾರರ ವಕೀಲರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಮಹಾನಗರ ಪಾಲಿಕೆಯ ಆಯುಕ್ತರು ಹಿಂದೆ ತಿಳಿಸಿರುವಂತೆ 161 ಕಟ್ಟಡಗಳಲ್ಲಿ, 151 ಕಟ್ಟಡಗಳನ್ನು ತೆರವುಗೊಳಿಸಲಾಗಿದ್ದು, ಉಳಿದಂತೆ 8 ಕಟ್ಟಡಗಳ ಮಾಲೀಕರಲ್ಲಿ 2 ಕಟ್ಟಡದ ಮಾಲೀಕರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 207059/2014 ಮತ್ತು ರಿಟ್ ಅರ್ಜಿಸಂ:207122/2014 ಅನ್ನು ಸಲ್ಲಿಸಿ, ಅದರೊಡನೆ ತಾತ್ಕಾಲಿಕ ತಡೆ ಆಜ್ಞೆಯನ್ನು ಪಡೆದಿರುತ್ತಾರೆ. ಆದ್ದರಿಂದ, ಆ 2 ಕಟ್ಟಡಗಳನ್ನು ತೆರವುಗೊಳಿಸಲಾಗಿರುವುದಿಲ್ಲ, ಉಳಿದಂತ 6 ಕಟ್ಟಡಗಳ ಮಾಲೀಕರು ಪರಿಹಾರದ ಚೆಕ್ ಅನ್ನು ಪಡೆದಿರುವುದಿಲ್ಲ ಹಾಗೂ ಮಹಾನಗರ ಪಾಲಿಕೆಗೆ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಮುಚ್ಚಳಿಕೆಯನ್ನು ಬರೆದುಕೊಟ್ಟಿರುವುದಿಲ್ಲ, ಇದಲ್ಲದೇ, ವಕೀಲರು ತಮ್ಮ ಆಕ್ಷೇಪಣೆಯಲ್ಲಿ ರಸ್ತೆ ಅಗಲೀಕರಣಗೊಳಿಸುವ ಪ್ರಕ್ರಿಯೆಯು ಮೇಲೆ ಹೇಳಿದ 6 ಕಟ್ಟಡಗಳ ಬಳಿ ತಲುಪಿದಂತೆ, ಸದರಿ ಕಟ್ಟಡಗಳ ತೆರವುಗೊಳಿಸುವ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು ಹಾಗೂ ಪ್ರಕರಣದಲ್ಲಿ ಮಹಾನಗರ ಪಾಲಿಕೆ, ವಿಜಾಪುರ ಇವರು ಒದಗಿಸಿರುವ ಮಾಹಿತಿಗಳನ್ನು ಹಾಗೂ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಿದಲ್ಲಿ, ವಿಜಾಪುರ, ವಿವೇಕ್‌ನಗರದ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ, 151 ಕಟ್ಟಡಗಳನ್ನು ತೆರವುಗೊಳಿಸಿರುವುದು ಕಂಡು ಬರುತ್ತದೆ. ಉಳಿದಂತೆ 8 ಕಟ್ಟಡಗಳು ತೆರವುಗೊಳಿಸಬೇಕಾಗಿದ್ದು, ಅದರಲ್ಲಿ 6 ಕಟ್ಟಡದವರು ಇದುವರೆಗೂ ತಮ್ಮ ಒಪ್ಪಿಗೆಯನ್ನು ನೀಡದೇ ಇರುವುದು ಸ್ಪಷ್ಟ ಪಡುತ್ತದೆ. 2 ಕಟ್ಟಡದವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಇದರಲ್ಲಿ ತಾತ್ಕಾಲಿಕ ತಡೆ ಆಜ್ಞೆ ನೀಡಿರುವ ಬಗ್ಗೆ ಎದುರುದಾರರು ತಿಳಿಸಿರುತ್ತಾರೆ. ಸದರಿ ತಡೆ ಆಜ್ಞೆ ಇರುವುದು ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ಪ್ರತಿಯಿಂದ ತಿಳಿದು ಬರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಜಾಪುರದ ವಿವೇಕ್ ನಗರ (ಪಶ್ಚಿಮ ಕಾಲೋನಿಯಲ್ಲಿ) ಅಕ್ರಮವಾಗಿ ರಸ್ತೆಯನ್ನು ಒತ್ತುವರಿ ಮಾಡಿರುವ ಉಳಿದಂತಹ 8 ಕಟ್ಟಡಗಳು ತೆರವುಗೊಳಿಸದೆ ಇರುವ ಬಗ್ಗೆ ಕಾನೂನಿನಡಿ ಸೂಕ್ತ ಕ್ರಮ ಜರುಗಿಸಿ ರಸ್ತೆಯನ್ನು ಅಗಲೀಕರಣ ಗೊಳಿಸುವಲ್ಲಿ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 6/10.

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**